

ಗೋಕರ್ಣದ ರಥಬೀದಿ



ಕಾಯ್ಕಿಣಿ ಮನೆಯಿಂದ ಸಮುದ್ರಕ್ಕೆ ದಾರಿ..

ಆ 'ರಥಬೀದಿ' ನನ್ನಲ್ಲಿನ ಕಾವ್ಯ ಮೋಹಿಯನ್ನು ಸಾಹಿತ್ಯ ಲೋಕದ ಇನ್ನೊಂದು ಸ್ವಪ್ನದೆಡೆಗೆ ತಂದು ನಿಲ್ಲಿಸಿತು.

ದರವನ್ನು ಕೇಳಿದಾಗ ಅನುಭವಕ್ಕೆ ಬಂದಿತು. ಇನ್ನು ಯಾಣವೆಂಬ ತಾಣ, ಸಹ್ಯಾದ್ರಿಯ ಮಡಿಲಿನಲ್ಲಿ ನೈಸರ್ಗಿಕವಾಗಿ ಮೈದಳೆದ ವಿಶಿಷ್ಟ ಶಿಲಾರಚನೆಯ ಒಂದು ಸುಂದರ ಪ್ರವಾಸಿ ತಾಣ. ಈ ಯಾಣದ ಗುಡ್ಡ ಹತ್ತಲು ಮೈಯಲ್ಲಿ ಮೇಣ ಇರಬೇಕು, ಮೈಯ ಮೇಣ ಕರಗಿಸಿ 2 ಕಿ.ಮೀ. ದೂರದ ಬೆಟ್ಟದ ದಾರಿ ಕ್ರಮಿಸಿ ಭೈರಲಿಂಗೇಶ್ವರನ ದರ್ಶನ ಮಾಡಬೇಕು.

ಕಾಡಿನ ಏರುದಾರಿಯಲ್ಲಿ ಪುಟ್ಟ ಜಲಪಾತಗಳ ಚೆಲುವನ್ನು ಸವಿಯುತ್ತ, ಆಯಾಸಗೊಂಡ ದೇಹದ ಮೇಲೆ ಆ ಝರಿಗಳ ಜಲಪ್ರೋಕ್ಷಣೆ ಮಾಡುತ್ತ, ಬೊಗಸೆಯಲ್ಲಿ ನೀರು ಹಿಡಿದು ಆದಿಮಾನವನಂತೆ ದಾಹ ಇಂಗಿಸಿಕೊಳ್ಳುವಾಗಿನ ರೋಮಾಂಚನ ಖುದ್ದು ಅನುಭವಿಸಿಯೇ ಸಾಕ್ಷಾತ್ಕರಿಸಿಕೊಳ್ಳಬೇಕು. ಭಕ್ತಾದಿಗಳಿಗೆ ಈ ಯಾಣದ ಭೈರಲಿಂಗೇಶ್ವರಕ್ಕೂ ಮತ್ತು ಗೋಕರ್ಣದ ಮಹಾಬಲೇಶ್ವರನಿಗೂ ಅಂತರ್ ಸಂಬಂಧವಿದೆ. ಮಹಾಶಿವರಾತ್ರಿಗೊಮ್ಮೆ ಎರಡೂ ಕಡೆ ಏಕಕಾಲಕ್ಕೆ ಜಾತ್ರೆ ನಡೆಯುತ್ತದೆ. ಗೋಕರ್ಣದ ಮಹಾಬಲೇಶ್ವರನಿಗೆ ಯಾಣದ ಭೈರಲಿಂಗೇಶ್ವರ ಲಿಂಗದ ಮೇಲೆ ಬೀಳುವ ಜಲ ಸಂಗ್ರಹಿಸಿ ಅಭಿಷೇಕ ಮಾಡುತ್ತಾರೆ. ಹದಿನೆಂಟನೆಯ ಶತಮಾನದವರೆಗೂ ಈ ಯಾಣವೆಂಬ ಪ್ರವಾಸೀ ತಾಣ ಹೊರಜಗತ್ತಿಗೆ ಪರಿಚಯವೇ ಇರಲಿಲ್ಲ. ಆಗಿನ ಬ್ರಿಟಿಷ್ ಅಧಿಕಾರಿಯೊಬ್ಬರ ಅನ್ವೇಷಣೆಯಿಂದ ಇದು ಪ್ರಚಾರಕ್ಕೆ ಬಂದಿತು. ಆದರೂ, ಸುನೀಲ್ ಕುಮಾರ್ ದೇಸಾಯಿ ನಿರ್ದೇಶನದ 'ನಮ್ಮೂರ ಮಂದಾರ ಹೂವೇ' ಎಂಬ ಚಲನಚಿತ್ರ ತೆರೆಕಾಣುವವರೆಗೆ ಈ ತಾಣ ಕನ್ನಡಿಗರಿಗೂ ಅಷ್ಟಾಗಿ ಪರಿಚಯವಿರಲಿಲ್ಲ.

ಗೋಕರ್ಣ ತಲುಪಿದಾಗ ಬೆಳಗಿನ ನಿಚ್ಚಳ ಬೆಳಕಾಗಿತ್ತು. ಹಾಗೆ ನೋಡಿದರೆ ಈ ಗೋಕರ್ಣವೆಂಬ ಊರು ನಮ್ಮ ಪ್ರವಾಸದ ಪಟ್ಟಿಯಲ್ಲಿ ಇರಲೇ ಇಲ್ಲ. ಗೋವಾದ ಬೀಚು, ಚರ್ಚು, ಕಾರವಾರದ ಕಡಲು ನೋಡಿಕೊಂಡು ವಾಪಸು ಬರುವಾಗ ಕತ್ತಲಾಯಿತೆಂದು ಕಾರವಾರದಲ್ಲುಳಿದು ಬರುವಾಗ ಇಲ್ಲೂ ಭೇಟಿ ನೀಡುವಂತಾಯಿತು.

ಯೋಜಿತ ಪಯಣದ ಲಿಸ್ಟಿನಲ್ಲಿಲ್ಲದ ಗೋಕರ್ಣದ ಆ ಬೆಳಗು ನನ್ನಳಗೊಂದು ವಿಶಿಷ್ಟ ಅನುಭೂತಿಯನ್ನು ಸೃಷ್ಟಿಸಿತು. ಗೋವಾ ಮತ್ತು ಕಾರವಾರದ ಕಡಲ ತೀರಗಳನ್ನು ಕಣ್ಣು ತುಂಬಿಕೊಂಡು ಅದೇ ಕನಸಿನಲ್ಲಿ ತೇಲುತ್ತಿದ್ದ ನನ್ನ ಅರೆ ಆಸ್ತಿಕ ಮನಸಿಗೆ, ಇನ್ನೂ ಬೆಳಗಿನ ಜಾಗರದಿಂದ ಎದ್ದಿರದ ಆ 'ರಥಬೀದಿ' ನನ್ನಲ್ಲಿನ ಕಾವ್ಯ ಮೋಹಿಯನ್ನು ಸಾಹಿತ್ಯಲೋಕದ ಇನ್ನೊಂದು ಸ್ವಪ್ನದೆಡೆಗೆ ತಂದು ನಿಲ್ಲಿಸಿತು.

ಊರುಗಳು ನನ್ನ ನೆನಪಿನಲ್ಲುಳಿವುದು ಆ ಊರಿನ ಕವಿಗಳ ಹೆಸರಿನಿಂದ. ಕಾರಡ್ಕ ಅಂದರೆ ತಿರುಮಲೇಶರು, ಕೊನಗವಳ್ಳಿ ಅಂದರೆ ಲಂಕೇಶರು, ಹನೇಹಳ್ಳಿ ಅಂದರೆ ಲಂಕೇಶರು, ಕೋಟಾವೆಂದರೆ ಶಿವರಾಮ ಕಾರಂತರು, ಕುಪ್ಪಳ್ಳಿಯೆಂದರೆ ಕುವೆಂಪು, ಮೂಡಿಗೆರೆಯೆಂದರೆ ತೇಜಸ್ವಿ, ಧಾರವಾಡವೆಂದರೆ ಬೇಂದ್ರೆ! ಅಷ್ಟೇ ಏಕೆ, ಕಂಬಾರರ ಮಾನಸಹಳ್ಳಿ ಶಿವಾಪುರ, ಆರ್.ಕೆ. ನಾರಾಯಣರವರ ಮಾಲ್ಗುಡಿ ಕೇವಲ ಒಂದು ಊರಾಗದೆ ಸಮಸ್ತ ಭೂಗೋಳದ ನಕ್ಷೆಯ ಮೇಲಿನ ಯಾವುದೋ ಒಂದು ಸೂಜಿಮೊನೆಯಷ್ಟಿನ ಜಾಗ ಇಡೀ ವಿಶ್ವವನ್ನೇ ಪ್ರತಿನಿಧಿಸುವ ಕೇಂದ್ರಗಳಾಗಿವೆ. ಇದೇ ಕೇಂದ್ರದ ಸುತ್ತ ಸುತ್ತುವ ವರ್ತಮಾನಗಳು, ಅದರಾಚೆಯೂ ಬೆಳೆಯುತ್ತ ಏಕಕಾಲಕ್ಕೆ ಸ್ಥಳೀಯವೂ ಜಾಗತಿಕವೂ ಆಗುತ್ತ ಕಾಲಕ್ಕೆ ಸಾಕ್ಷಿಯಾಗುತ್ತವೆ

ಹೇಗೆ ಚಿತ್ತಾಲರು ಮುಂಬಯಿ ಮಧ್ಯಮವರ್ಗದ ಬದುಕನ್ನು ಕಟ್ಟಿಕೊಟ್ಟರೋ ಅದೇ ಮುಂಬಯಿಯನ್ನು ಬೇರೆಯೇ ಕೋನದಲ್ಲಿ ಚಿತ್ರಿಸಿ ಕನ್ನಡಸಾಹಿತ್ಯದಲ್ಲಿ 'ಮುಂಬಯಿ ಎಂದರೆ ಜಯಂತ ಕಾಯ್ಕಿಣಿ' ಎನ್ನುವಷ್ಟರಮಟ್ಟಿಗೆ ಜೋಡಿ ಪದಗಳಾಗಿ ಇವೆ. ಹೀಗೆ ಇವರ ಮುಂಬಯಿಯ ಯಾನ ಆರಂಭವಾಗಿದ್ದು ಇದೇ ಗೋಕರ್ಣವೆಂಬ ರಥಬೀದಿಯಿಂದ ಎನ್ನುವುದನ್ನೂ ಮರೆಯುಲಾದೀತೆ?

ಜಯಂತರ ಕಥೆಯ ಬಹುತೇಕ ಪಾತ್ರಗಳು ಈ ಕರಾವಳಿಯಿಂದ ಹೊರಟು ಮುಂಬಯಿಯಲ್ಲಿ ಸ್ಥಾಯಿಯಾಗುತ್ತವೆ, ಅಥವ ಮುಂಬಯಿಯಿಂದ ಹೊರಟು ಕರಾವಳಿಯಲ್ಲಿ ಕೊನೆಗೊಳ್ಳುತ್ತವೆ. ಜಯಂತರ ಕಥೆಗಳಲ್ಲಿ ರಥಬೀದಿಯೊಂದು ವಿಶಿಷ್ಟ ಆವರಣ ಕಲ್ಪಿಸಿಕೊಡುತ್ತದೆ. ಇವರ ಅನೇಕ ಕಥೆ–ಕವಿತೆಗಳ ಸವಾರಿ ಈ ರಥಬೀದಿಯಿಂದಲೇ. ರಥಬೀದಿಯಿಂದ